**ದಿನಾಂಕ: 29.07.2025ರಂದು ನಡೆದ ಪ್ರಶಿಕ್ಷಣ ಪರಿಷತ್‌ನ 44ನೇ ಸಭೆಯ ನಡಾವಳಿಗಳು**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ 44ನೇ ಸಭೆಯನ್ನು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ: 29-07-2025ರ** ಮಂಗಳವಾರ ಬೆಳಿಗ್ಗೆ 11.30 ಗಂಟೆಗೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಕರೆಯಲಾಗಿತ್ತು.

**ಸಭೆಯಲ್ಲಿ ಹಾಜರಿದ್ದವರು:**

1. ಡಾ. ಅಹಲ್ಯಾ ಎಸ್., ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ – ಅಧ್ಯಕ್ಷರು
2. ಶ್ರೀಮತಿ ಸತ್ಯವತಿ ಎಮ್., ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ) – ಸದಸ್ಯರು
3. ಪ್ರೊ. ವಿ ಗಿರೀಶ್ ಚಂದ್ರ, ಡೀನ್, ಭಾಷಾ ನಿಕಾಯ, ಕ.ಸಂ.ವಿ. – ಸದಸ್ಯರು
4. ಪ್ರೊ. ಶಿವಾನಿ ವಿ., ಡೀನ್, ಶಾಸ್ತ್ರ ನಿಕಾಯ, ಕ.ಸಂ.ವಿ. – ಸದಸ್ಯರು
5. ಪ್ರೊ. ಸಿ. ಪಾಲಯ್ಯ, ಡೀನ್, ಪ್ರಾಚೀನ ಭಾರತೀಯ ವಿಜ್ಞಾನ ನಿಕಾಯ, ಕ.ಸಂ.ವಿ. – ಸದಸ್ಯರು
6. ಡಾ. ವಿನಯ್ ಪಿ., ಡೀನ್, ವೇದಾಂತ ನಿಕಾಯ, ಕ.ಸಂ.ವಿ. – ಸದಸ್ಯರು
7. ಡಾ. ಶರತ್ ಚಂದ್ರ ಸ್ವಾಮೀಜಿ, ಡೀನ್, ವೈದಿಕ ಅಧ್ಯಯನ ನಿಕಾಯ, ಕ.ಸಂ.ವಿ. – ಸದಸ್ಯರು
8. ಡಾ. ಶ್ರೀಕಾಂತ ಪುರೋಹಿತ್, ಪ್ರಾಚಾರ್ಯರು, ಶ್ರೀ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಕಾಲೇಜು, ಶ್ರೀ ಆದಿಚುಂಚನಗಿರಿ ಕ್ಷೇತ್ರ, ನಾಗಮಂಗಲ ತಾಲ್ಲೂಕು, ಮಂಡ್ಯ ಜಿಲ್ಲೆ –571811 – ಸದಸ್ಯರು
9. ಡಾ. ನಾಗಪತಿ ಕೇಶವ ಭಟ್ಟ, ಪ್ರಾಚಾರ್ಯರು, ಶ್ರೀ ರಾಘವೇಂದ್ರ ಭಾರತೀ ಸವೇದ ಸಂಸ್ಕೃತ ಕಾಲೇಜು, ಸುಬ್ರಹ್ಮಣ್ಯ ಸುರಕಟ್ಟೆ, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ –581334 – ಸದಸ್ಯರು
10. ಡಾ. ಪಿ. ಸತ್ಯನಾರಾಯಣ, ಪ್ರಾಂಶುಪಾಲರು(ಪ್ರ), ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು – ಸದಸ್ಯರು
11. ಡಾ. ರಾಮಕೃಷ್ಣ ಭಟ್ ಕೆ., ಕುಲಸಚಿವರು (ಮೌಲ್ಯಮಾಪನ)(ಪ್ರ), ಕ.ಸಂ.ವಿ. – ಆಹ್ವಾನಿತರು
12. ಪ್ರೊ. ಸಿ. ಪಾಲಯ್ಯ, ಕುಲಸಚಿವರು(ಪ್ರ), ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ –ಸದಸ್ಯ ಕಾರ್ಯದರ್ಶಿಗಳು

**ಸಭೆಯಲ್ಲಿ ಹಾಜರಿಲ್ಲದವರು:**

1. ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಅಪರ ಮುಖ್ಯ ಕಾರ್ಯದರ್ಶಿಗಳು, ಹಣಕಾಸು ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
4. ಆಯುಕ್ತರು, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಅರಮನೆ ಆವರಣ ಮೈಸೂರು.
5. ಡಾ. ಎಸ್. ದಯಾಶಂಕರ್, ಪ್ರಾಚಾರ್ಯರು, ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು.

ಸಭೆಯ ಆರಂಭದಲ್ಲಿ ಕುಲಸಚಿವರು ಪ್ರಾಸ್ತಾವಿಕವಾಗಿ ಮಾತನಾಡಿ ಸ್ವಾಗತಿಸಿದರು. ನಂತರ ಕಾರ್ಯಸೂಚಿಯಂತೆ ವಿಷಯವಾರು ಚರ್ಚಿಸಿ ನಿರ್ಣಯ ಕೈಗೊಳ್ಳಲಾಯಿತು.

| ವಿ. ಸಂಖ್ಯೆ | ವಿಷಯ ಮತ್ತು ಟಿಪ್ಪಣಿ |
|---|---|
| ವಿಷಯ 01 | **FDP ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಅನುಮತಿ ನೀಡುವ ಕುರಿತು.** |
| ಟಿಪ್ಪಣಿ | ಆಂತರಿಕ ಗುಣಮಟ್ಟ ಭರವಸೆ ಕೋಶ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು- ಇದರ ವತಿಯಿಂದ ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ವಿಭಾಗದ ಸಿಬ್ಬಂದಿಗಳಿಗೆ 08 ದಿನಗಳ ಆನ್ಲೈನ್ ಮೂಲಕ FDP ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **FDP ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.** |
| ವಿಷಯ 02 | **2024-25ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ತನ್ನ ಹಣಕಾಸಿನ ವಹಿವಾಟನ್ನು Tally ತಂತ್ರಾಂಶದಲ್ಲಿ ನಮೂದಿಸಲಾಗುತ್ತಿದೆ. ಹಣಕಾಸಿನ ವ್ಯವಹಾರಗಳನ್ನು M/S. D.N Joshi & Co. ರವರು ನಿರ್ವಹಿಸುತ್ತಿದ್ದಾರೆ. ಸದರಿಯವರು 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಿದ್ದಪಡಿಸಿ, ಸಲ್ಲಿಸಿರುವ ಲೆಕ್ಕಪತ್ರಗಳನ್ನು ಸಭೆಯ ಅನುಮೋದನೆಗಾಗಿ ಮಂಡಿಸಿದೆ |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2024-25ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು (Balance Sheet, Receipts & Payment and Income & Expenditure) ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 03 | **ಶ್ರೀ ತ್ರಿನೇತ್ರ ಇಂಟರ್ ನ್ಯಾಷನಲ್ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮಾನ್ಯತೆ ನವೀಕರಿಸುವ ಬಗ್ಗೆ.** |
| ಟಿಪ್ಪಣಿ | ಶ್ರೀ ತ್ರಿನೇತ್ರ ಇಂಟರ್ ನ್ಯಾಷನಲ್ ಯೋಗ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಪೂರ್ವವಾಹಿನಿ ,ಡಿ.ಎಂ.ಎಸ್. ಚಂದ್ರವನ ಆಶ್ರಮ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಇವರಿಗೆ ಯೋಗ ಸರ್ಟಿಫಿಕೇಟ್, ಡಿಪ್ಲೋಮಾ, ಪಿ.ಜಿ.ಡಿಪ್ಲೋಮಾ ಕೋರ್ಸ್‌ಗಳನ್ನು ನಡೆಸಲು 2020-21ನೇ ಸಾಲಿನಿಂದ 2022-23ನೇ ಸಾಲಿನ ವರೆಗೆ ಮಾನ್ಯತೆಯನ್ನು ನೀಡಲಾಗಿತ್ತು. ಮುಂದುವರೆದು, ಮಾನ್ಯತೆ ನವೀಕರಣಕ್ಕಾಗಿ ವಿಶ್ವವಿದ್ಯಾಲಯವು ರಚಿಸಿದ್ದ ಸಮಿತಿಯು ಭೇಟಿ ನೀಡಿ ಸದರಿ ಸಂಸ್ಥೆಗೆ ಮಾನ್ಯತೆಯನ್ನು ನವೀಕರಿಸಬಹುದೆಂದು ಎಂದು ವರದಿಯನ್ನು ಸಲ್ಲಿಸಿರುತ್ತದೆ. ಸದರಿ ಸಂಸ್ಥೆಗೆ 2023-24ನೇ ಸಾಲಿನಿಂದ ಪೂರ್ವಾನ್ವಯವಾಗುವಂತೆ 2025-26ನೇ ಸಾಲಿನ ವರೆಗೆ ಮಾನ್ಯತೆ ನವೀಕರಿಸಲು ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸದರಿ ಸಂಸ್ಥೆಗೆ 2023-24ನೇ ಸಾಲಿನಿಂದ ಪೂರ್ವಾನ್ವಯವಾಗುವಂತೆ 2025-26ನೇ ಸಾಲಿನ ವರೆಗೆ ಮಾನ್ಯತೆ ನವೀಕರಿಸಲು ಸಭೆಯು ಅನುಮೋದಿಸಿತು. ಮುಂದುವರಿದು, ಸಂಶೋಧನಾ ಕೇಂದ್ರಗಳಿಗೆ ಇನ್ನು ಮುಂದೆ ಮಾನ್ಯತಾ ಅವಧಿ ಮುಗಿಯುತ್ತಿದ್ದಂತೆ ಮಾನ್ಯತೆಯನ್ನು ನವೀಕರಿಸಲು ಅಧ್ಯಯನಾಂಗದಿಂದ ಸೂಕ್ತ ಅಗತ್ಯ ಕ್ರಮವಹಿಸುವಂತೆ ಸಭೆಯು ಸೂಚಿಸಿತು.** |
| ವಿಷಯ 04 | **2025-26ನೇ ಸಾಲಿನಿಂದ ಜ್ಯೋತಿಷ್ಯ/ವಾಸ್ತು ಸರ್ಟಿಫಿಕೇಟ್/ಡಿಪ್ಲೋಮಾ/ಅಡ್ವಾನ್ಸ್ ಡಿಪ್ಲೋಮಾ ಕೋರ್ಸ್‌ಗಳಿಗೆ, ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಬಗೆಗೆ.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ನಡೆಯುತ್ತಿರುವ ಜ್ಯೋತಿಷ್ಯ/ವಾಸ್ತು ಸರ್ಟಿಫಿಕೇಟ್/ ಡಿಪ್ಲೋಮಾ/ ಅಡ್ವಾನ್ಸ್ ಡಿಪ್ಲೋಮಾ ಕೋರ್ಸ್‌ಗಳಿಗೆ, ಪರಿಷ್ಕೃತ ಪಠ್ಯಕ್ರಮವನ್ನು ಅಧ್ಯಯನ ಮಂಡಳಿಯು ಸಿದ್ಧಪಡಿಸಿರುತ್ತದೆ. 2025-26ನೇ ಸಾಲಿನಿಂದ ಪರಿಷ್ಕೃತ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಲು ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು. ಹಾಗೂ ಆದ್ಯತೆಯ ಮೇರೆಗೆ ಪಠ್ಯಪುಸ್ತಕಗಳನ್ನು ಮುದ್ರಿಸುವಂತೆ ನಿರ್ದೇಶಿಸಿತು.** |
| ವಿಷಯ 05 | **ಬ್ರಹ್ಮವಿದ್ಯಾ ಟ್ರಸ್ಟ್ , #12, 9ನೇ ಮುಖ್ಯರಸ್ತೆ, ಜಯನಗರ, ಮೈಸೂರು ಮತ್ತು ಆಯುರ್ವೇದ ಅಕಾಡಮಿ, 229/1, 4ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು- ಈ ಎರಡೂ ಸಂಶೋಧನಾ ಕೇಂದ್ರಗಳಿಗೆ ಮಾನ್ಯತೆ ನೀಡುವ ಬಗೆಗೆ.** |
| ಟಿಪ್ಪಣಿ | ಬ್ರಹ್ಮವಿದ್ಯಾ ಟ್ರಸ್ಟ್ , #12, 9ನೇ ಮುಖ್ಯರಸ್ತೆ, ಜಯನಗರ, ಮೈಸೂರು ಮತ್ತು ಆಯುರ್ವೇದ ಅಕಾಡಮಿ, 229/1, 4ನೇ ಮುಖ್ಯರಸ್ತೆ, 2ನೇ ಅಡ್ಡರಸ್ತೆ, ಚಾಮರಾಜಪೇಟೆ, ಬೆಂಗಳೂರು- ಈ ಎರಡೂ ಸಂಶೋಧನಾ ಕೇಂದ್ರಗಳಿಗೆ ನಿಯಮಾನುಸಾರ ಪಂಚಸದಸ್ಯ ಸಮಿತಿಯು ಭೇಟಿ ನೀಡಿ ಸಂಶೋಧನಾ ಕೇಂದ್ರಗಳ ಮಾನ್ಯತೆಯನ್ನು ನೀಡಬಹುದು ಎಂದು ವರದಿಯನ್ನು ಸಲ್ಲಿಸಿರುತ್ತವೆ. 2025-26 ನೇ ಸಾಲಿನಿಂದ 2027-28 ಸಾಲಿನವರೆಗೆ ಮೂರು ವರ್ಷಗಳ ಅವಧಿಗೆ ಮಾನ್ಯತೆಯನ್ನು ನೀಡಲು ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಸಭೆಯು ಅನುಮೋದಿಸಿತು. ಆಯುರ್ವೇದ ಅಕಾಡಮಿಗೆ ಸಂಸ್ಕೃತ ಪ್ರಧಾನಿತ ವಿಷಯಗಳಿಗೆ ಮಾನ್ಯತೆ ನೀಡುವಂತೆ ಸಭೆಯು ತೀರ್ಮಾನಿಸಿತು.**<br>**ಹಾಗೂ ವೃತ್ತಿಪರ ಕೋರ್ಸ್ ಗಳಿಗೆ ಸಂಬಂಧಿಸಿದಂತೆ ಮಾನ್ಯತಾ ಶುಲ್ಕವನ್ನು ಹೆಚ್ಚಿಸುವ ಸಂಬಂಧ ಶುಲ್ಕಪರಿಷ್ಕರಣಾ ಸಮಿತಿಯಲ್ಲಿ ನಿರ್ಧರಿಸುವಂತೆ ತೀರ್ಮಾನಿಸಲಾಯಿತು.** |
| ವಿಷಯ 06 | **2024-25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಪರಿಸರ ಕಾಲೇಜಿನ ಬಿ.ಎ. ತರಗತಿಗಳಲ್ಲಿ ಸಂಸ್ಕೃತ ಐಚ್ಛಿಕ ಮತ್ತು ಸಂಸ್ಕೃತ ಸಾಮಾನ್ಯ(ಭಾಷಾ) ಹಾಗೂ ಓಪನ್ ಎಲೆಕ್ಟಿವ್ ಪತ್ರಿಕೆಯಾಗಿ ಅಳವಡಿಸಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | 2024-25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯದ ಪರಿಸರ ಕಾಲೇಜಿನ ಬಿ.ಎ. ತರಗತಿಗಳಲ್ಲಿ ಸಂಸ್ಕೃತ ಐಚ್ಛಿಕ ಮತ್ತು ಸಂಸ್ಕೃತ ಸಾಮಾನ್ಯ(ಭಾಷಾ) ಹಾಗೂ ಓಪನ್ ಎಲೆಕ್ಟಿವ್ ಪತ್ರಿಕೆಯಾಗಿ ಅಳವಡಿಸಲು ಅಧ್ಯಯನ ಮಂಡಳಿಯ ಸಭೆಯಲ್ಲಿ ಬಿ.ಎ ಪ್ರಥಮ, ದ್ವಿತೀಯ, ತೃತೀಯ ಷಾಣ್ಮಾಸಿಕ ಸತ್ರಕ್ಕೆ ಹೊಂದುವಂತೆ ಪಾಠ್ಯಕ್ರಮ ರಚಿಸಲಾಗಿದೆ. 2024-25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ಸದರಿ ಪಾಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 07 | **2024-25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯ ಪರಿಸರ ಕಾಲೇಜಿನ ಮತ್ತು ಸಂಯೋಜಿತ ಕಾಲೇಜುಗಳ ಬಿ.ಎ. ತರಗತಿಗಳಲ್ಲಿ ಇತಿಹಾಸ ಪತ್ರಿಕೆಯನ್ನು ಮೇಜರ್ ಪತ್ರಿಕೆಯಾಗಿ ಮತ್ತು ಐಚ್ಛಿಕ (ಐದನೆಯ) ಪತ್ರಿಕೆಯಾಗಿ ಅಳವಡಿಸಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | **2024-25**ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ವಿಶ್ವವಿದ್ಯಾಲಯ ಪರಿಸರ ಕಾಲೇಜಿನ ಮತ್ತು ಸಂಯೋಜಿತ ಕಾಲೇಜುಗಳ ಬಿ.ಎ. ತರಗತಿಗಳಲ್ಲಿ ಇತಿಹಾಸ ವಿಷಯವನ್ನು ಮೇಜರ್ ಪತ್ರಿಕೆಯಾಗಿ ಮತ್ತು ಐಚ್ಛಿಕ (ಐದನೆಯ) ಪತ್ರಿಕೆಯಾಗಿ ಅಳವಡಿಸಲು ಅಧ್ಯಯನ ಮಂಡಳಿಯ ಸಭೆಯಲ್ಲಿ ಬಿ.ಎ. ಪ್ರಥಮ, ದ್ವಿತೀಯ, ಷಾಣ್ಮಾಸಿಕ ಪಾಠ್ಯಕ್ರಮಕ್ಕೆ ಹೊಂದುವಂತೆ |

| | |
|---|---|
| | ಪಾಠ್ಯಕ್ರಮ ರಚಿಸಲಾಗಿದೆ. 2024–25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ಸದರಿ ಪಾಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆಗೆ ಸಲ್ಲಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 08** | **ಅಲಂಕಾರಶಾಸ್ತ್ರ ವಿಭಾಗದ ಪಾಠ್ಯಕ್ರಮದ ಅನುಮೋದನೆಯ ಬಗ್ಗೆ.** |
| **ಟಿಪ್ಪಣಿ** | ಅಲಂಕಾರಶಾಸ್ತ್ರ ವಿಭಾಗದ ಎಂ.ಎ. ಪಾಠ್ಯಕ್ರಮದ ಬದಲಾವಣೆ ಮಾಡಲು ಅಲಂಕಾರಶಾಸ್ತ್ರ ವಿಭಾಗದ ಅಧ್ಯಯನ ಮಂಡಳಿಯ ಸಭೆಯನ್ನು ಕರೆಯಲಾಗಿತ್ತು. ಸದರಿ ಸಭೆಯಲ್ಲಿ ಎಂ.ಎ. ಪ್ರಥಮ, ದ್ವಿತೀಯ, ತೃತೀಯ, ಚತುರ್ಥ ಸೆಮಿಸ್ಟರ್ ಪಾಠ್ಯಕ್ರಮವನ್ನು ಸಿದ್ಧಪಡಿಸಲಾಗಿದ್ದು, 2024–25ನೇ ಶೈಕಣಿಕ ಸಾಲಿನಿಂದ ಅನ್ವಯವಾಗುವಂತೆ ಸದರಿ ಪಾಠ್ಯಕ್ರಮವನ್ನು ಅಳವಡಿಸಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 09** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಸಂಜೆ ಕಾಲೇಜಿನ ಪರಿನಿಯಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ರಾಜ್ಯ ಸರ್ಕಾರವು 2010 ರಲ್ಲಿ ಕರ್ನಾಟಕ ರಾಜ್ಯ ಶಾಸಕಾಂಗದಲ್ಲಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಕಾಯ್ದೆ 2009 ಅನ್ನು ಅಂಗೀಕರಿಸುವ ಮೂಲಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿತು. ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯ ಅನುದಾನ ಆಯೋಗದಿಂದ ಯುಜಿಸಿ ಕಾಯ್ದೆ, 12B ಮತ್ತು 2F ಸ್ಥಾನವನ್ನು ಪಡೆದಿದೆ ಹಾಗೂ NAAC 'A' ಶ್ರೇಣಿಯಿಂದ ಪ್ರತ್ಯಾಯಿತವಾಗಿದೆ.<br>ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ ಸಂಜೆ ಕಾಲೇಜನ್ನು ಆರಂಭಿಸುವಂತೆ ಸಂಸ್ಕೃತಾಭಿಮಾನಿಗಳಿಂದ ಹಾಗೂ ಸಾರ್ವಜನಿಕರಿಂದ ಬೇಡಿಕೆಗಳು ಬಂದಿದ್ದರಿಂದ ಸಂಜೆ ಕಾಲೇಜನ್ನು ಸ್ಥಾಪಿಸಲಾಯಿತು. ಸಂಜೆ ಕಾಲೇಜಿನ ಸ್ಥಾಪನೆಗೆ ಸಂಬಂಧಿಸಿದ Statute governing the Samskrit Evening College ಪರಿನಿಯಮವನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವ ಬಗ್ಗೆ ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **Statute governing the Samskrit Evening College ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ತೀರ್ಮಾನಿಸಿತು.** |
| **ವಿಷಯ 10** | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ (Cadre and Recruitment) ನಿಯಮವನ್ನು ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಪಡೆಯುವ ಬಗೆಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮಕ್ಕೆ (Cadre and Recruitment) ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ವೃಂದ ಮತ್ತು ನೇಮಕಾತಿ ನಿಯಮಕ್ಕೆ (Cadre and Recruitment) ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ವೃಂದ ಮತ್ತು ನೇಮಕಾತಿ ನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ತೀರ್ಮಾನಿಸಿತು.** |

| | |
|---|---|
| ವಿಷಯ 11 | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು (Statute of the Directorate of Sanskrit Education) ಸರ್ಕಾರಕ್ಕೆ ಸಲ್ಲಿಸಲು ಸಮಿತಿಯ ಅನುಮೋದನೆ ಪಡೆಯುವ ಬಗೆಗೆ.** |
| ಟಿಪ್ಪಣಿ | ಕರ್ನಾಟಕ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಅಧೀನವಾದ ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ **ಪರಿನಿಯಮವನ್ನು** (**Statute of the Directorate of Sanskrit Education**) ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಬೇಕಾಗಿದೆ. ಸರ್ಕಾರದ ಅನುಮೋದನೆಗೆ ಪ್ರಸ್ತಾವನೆ ಸಲ್ಲಿಸಲು ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ **ಪರಿನಿಯಮಕ್ಕೆ** (**Statute of the Directorate of Sanskrit Education**) ಸಭೆಯ ಅನುಮತಿ ಕೋರಿದೆ. |
| ನಿರ್ಣಯ | **ಸಂಸ್ಕೃತ ಶಿಕ್ಷಣ ನಿರ್ದೇಶನಾಲಯದ ಪರಿನಿಯಮವನ್ನು ಅನುಮೋದಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ತೀರ್ಮಾನಿಸಿತು.** |
| ವಿಷಯ 12 | **ಶ್ರೀ ಬಾಲಾಜಿ ವಿದ್ಯಾಪೀಠ, ಡೀಮ್ಡ್ ಟು ಬಿ ವಿಶ್ವವಿದ್ಯಾಲಯ– ಇದರೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | ಪಾಂಡಿಚೇರಿಯ ಪಿಳ್ಳೈಯಾರ್ಕುಪ್ಪಂನಲ್ಲಿರುವ **ಶ್ರೀ ಬಾಲಾಜಿ ವಿದ್ಯಾಪೀಠ, ಡೀಮ್ಡ್ ಟು ಬಿ ವಿಶ್ವವಿದ್ಯಾಲಯವು** ಉತ್ತಮ ಮೂಲಭೂತ ಸೌಕರ್ಯ ಹಾಗೂ ಶೈಕ್ಷಣಿಕ ಸೌಲಭ್ಯಗಳನ್ನು ಹೊಂದಿದೆ. ಇಲ್ಲಿ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ, ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 13 | **ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್– ಈ ಸಂಸ್ಥೆಯೊಂದಿಗೆ** ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ. |
| ಟಿಪ್ಪಣಿ | ನಕ್ಷತ್ರ ಸೈನ್ಸಸ್ ಪ್ರೈವೇಟ್ ಲಿಮಿಟೆಡ್, ಕಂಪನಿಗಳ ಕಾಯ್ದೆ **2013** ರ ಅಡಿಯಲ್ಲಿ ಸಂಯೋಜಿಸಲ್ಪಟ್ಟ ಒಂದು ಘಟಕ, ಅನನ್ಯ ಕಾರ್ಪೊರೇಟ್ ಗುರುತಿನ ಸಂಖ್ಯೆ **U85499KA2023PTC172130** ನೊಂದಿಗೆ, ಸಂಖ್ಯೆ **27**, **1** ನೇ ಕ್ರಾಸ್, ಗೋಪಾಲಪ್ಪ ಲೇಔಟ್, ಹೆಬ್ಬಾಳ ಕೆಂಪಾಪುರ, ಬೆಂಗಳೂರು **560024** – ಈ ಸಂಸ್ಥೆಯೊಂದಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಅನುಕೂಲವಾಗುವಂತೆ, ಈ ವಿಶ್ವವಿದ್ಯಾಲಯದೊಂದಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| ವಿಷಯ 14 | **CMR ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆ (MOU) ಮಾಡಿಕೊಳ್ಳುವ ಬಗ್ಗೆ.** |
| ಟಿಪ್ಪಣಿ | CMR ವಿಶ್ವವಿದ್ಯಾಲಯ ಮತ್ತು ಕರ್ನಾಟಕ ಸಂಸ್ಕೃತ ವಿಶವವಿದ್ಯಾಲಯ– ಎರಡೂ ಸಂಸ್ಥೆಗಳ ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ಸಂಶೋಧನಾ ಅವಕಾಶಗಳನ್ನು ಒದಗಿಸುವುದು ಹಾಗೂ ಬೋಧನೆ ಮತ್ತು ಸಂಶೋಧನೆಯ ಪರಿಣಾಮಕಾರಿತ್ವವನ್ನು ಹೆಚ್ಚಿಸುವುದು. ಪರಸ್ಪರ ಆಸಕ್ತಿಯ ವಿಷಯಗಳಲ್ಲಿ ಸೆಮಿನಾರ್, ಸಮ್ಮೇಳನಗಳು ಮತ್ತು ಅಕಾಡೆಮಿಕ್ ವರ್ಕ್‌ಷಾಪ್‌ಗಳನ್ನು ಸಂಯೋಜಿಸುವುದು, ಪುಸ್ತಕಗಳು, ಸೆಮಿನಾರ್ ಮತ್ತು ಪ್ರಕಟಣೆಗಳು ಇತ್ಯಾದಿಗಳನ್ನು ಪ್ರಕಟಿಸುವುದು, ಬೋಧಕ/ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ವಿನಿಮಯ ಸಂಯುಕ್ತ ಸಂಶೋಧನೆ ಮತ್ತು ಪ್ರಕಟಣಾ ಚಟುವಟಿಕೆಗಳು ಅಕಾಡೆಮಿಕ್ ಸಂಪನ್ಮೂಲ ಸಾಮಗ್ರಿಗಳ ವಿನಿಮಯ ಮತ್ತು ಇತರೆ ಯಾವುದೇ ಪರಸ್ಪರ ಆಸಕ್ತಿಯ |

| | |
|---|---|
| | ಯೋಜನೆಗಳು/ಚಟುವಟಿಕೆಗಳನ್ನು ಕೈಗೊಳ್ಳುವ ಉದ್ದೇಶವನ್ನು ಹೊಂದಿದೆ. ಈ MOU ಭಾರತೀಯ ಜ್ಞಾನ ಪದ್ಧತಿ (Indian Knowledge System – IKS) ಕ್ಷೇತ್ರದಲ್ಲಿ ಸಹಕಾರವನ್ನು ಉದ್ದೇಶಿಸಿದೆ. ಆದ್ದರಿಂದ CMR ವಿಶ್ವವಿದ್ಯಾಲಯದೊಂದಿಗೆ ಒಡಂಬಡಿಕೆಯನ್ನು ಮಾಡಿಕೊಳ್ಳಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| ನಿರ್ಣಯ | ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |
| ವಿಷಯ 15 | ವಿದೇಶಿ ವಿದ್ಯಾರ್ಥಿಗಳಿಗೆ ಅಧ್ಯಯನಕ್ಕೆ ಸಂಬಂಧಿಸಿದಂತೆ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ. |
| ಟಿಪ್ಪಣಿ | ವಿದೇಶಿ ವಿದ್ಯಾರ್ಥಿಗಳು ಅಧ್ಯಯನ ಮಾಡುವ ಬಿ.ಎ/ಬಿ.ಎಸ್ಸಿ/ಎಂ.ಎ/ಎಂ.ಎಸ್ಸಿ ಪದವಿಗಳು ಮತ್ತು ಇತರೆ ಕೋರ್ಸ್ಗಳ ಶುಲ್ಕಕ್ಕೆ ಸಂಬಂಧಿಸಿದಂತೆ ಸಮಿತಿಯನ್ನು ರಚಿಸಲಾಗಿ, ಸಮಿತಿಯು 2025–26ನೇ ಸಾಲಿನಿಂದ ಈ ಕೆಳಕಂಡಂತೆ ಶುಲ್ಕವನ್ನು ನಿಗದಿಪಡಿಸಿದೆ. ನಿಗದಿಪಡಿಸಿರುವ ಶುಲ್ಕಕ್ಕೆ ಪ್ರಶಾಸನ ಸಮಿತಿಯ ಒಪ್ಪಿಗೆಯನ್ನು ಕೋರಿದೆ. |

| KARNATAKA SANSKRIT UNIVERSITY, BANGALORE-18<br>2025-26 FEE STRUCTURE For Foreign Student`s | | |
|---|---|---|
| B.A/ B.Sc/ M.A/ M.Sc Degree | | |
| Sl.No | Details | Amount (yearly Fee) |
| 01 | B.A | 10000.00 |
| 02 | B.Sc | 25000.00 |
| 03 | M.A | 15000.00 |
| 04 | M.Sc | 30000.00 |
| CERTIFICATE /DIPLOMA/PG.DIPLOMA Course | | |
| | CERTIFICATE | 5000.00 |
| | DIPLIMA | 7500.00 |
| | PG.DIPLOMA | 10000.00 |
| Ph.D Degree | | |
| 01 | Application Fee | 1000.00 |
| 03 | Provisional Registration Fee | 5000.00 |
| 03 | Course work Fee | 5000.00 |
| 04 | Course work Examination Fee | 3000.00 |
| 05 | Course work Revaluation Fee | 2000.00 |
| 06 | Library Fee | 1000.00 |
| 07 | Annual Tuition Fee | 15000.00 |
| 08 | Thesis title Change Fee | 5000.00 |
| 09 | Thesis Submission & Examination Fee | 30000.00 |
| 10 | Convocation Fee | 5000.00 |
| 11 | Re-registration Fee | 50000.00 |
| 12 | Publication Fee | 20000.00 |
| 13 | Extension Fee | 15000.00 |
| For Both Indian citizens and foreigners. (D.Lit) | | |
| 01 | D.Lit | 35000.00 |

| | |
|---|---|
| ನಿರ್ಣಯ | ಅನುಮೋದಿಸಿತು. ಹಾಗೂ ಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಳ್ಳುವಂತೆ ನಿರ್ದೇಶಿಸಿತು. |

| | |
|---|---|
| ವಿಷಯ 16 | **ಶ್ರೇಯೋ ಫೌಂಡೇಶನ್‌ನ ಸಹಯೋಗದೊಂದಿಗೆ ಚಿತ್ರಕಲೆ ಮತ್ತು ರಂಗೋಲಿಯಲ್ಲಿ ಪ್ರಮಾಣಪತ್ರ ಕಾರ್ಯಕ್ರಮಗಳಿಗೆ ಅನುಮೋದನೆ ಪಡೆಯುವ ಬಗ್ಗೆ.** |
| ಟಿಪ್ಪಣಿ | ದೃಶ್ಯ ಮತ್ತು ಸಾಂಪ್ರದಾಯಿಕ ಕಲೆಗಳ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಷ್ಠಿತ ಸಂಸ್ಥೆಯಾದ ಶ್ರೇಯೋ ಫೌಂಡೇಶನ್‌ನ ಸಹಯೋಗದೊಂದಿಗೆ ನೀಡಲು ಪ್ರಸ್ತಾಪಿಸಲಾದ (1) ರಂಗೋಲಿ ಮತ್ತು ಡ್ರಾಯಿಂಗ್ ಮತ್ತು (2) ಭಾವಚಿತ್ರ ಚಿತ್ರಕಲೆ ಮತ್ತು ರಂಗೋಲಿ ಎಂಬ ಎರಡು ಪ್ರಮಾಣಪತ್ರ ಕಾರ್ಯಕ್ರಮಗಳ ಪರಿಚಯವನ್ನು ಪರಿಗಣಿಸಲು ಸ್ಥಳೀಯ ಕಲಾ ಪ್ರಕಾರಗಳು, ಕೌಶಲ್ಯ ಅಭಿವೃದ್ಧಿ ಮತ್ತು ಸಮುದಾಯದ ತೊಡಗಿಸಿಕೊಳ್ಳುವಿಕೆಯನ್ನು ರಚನಾತ್ಮಕ ಶೈಕ್ಷಣಿಕ ಕೊಡುಗೆಗಳ ಮೂಲಕ ಉತ್ತೇಜಿಸುವ ಗುರಿಯನ್ನು ಹೊಂದಿರುವ ವಿಶ್ವವಿದ್ಯಾಲಯದ ವಿಸ್ತರಣೆ ಮತ್ತು ಪ್ರಭಾವ ಉಪಕ್ರಮಗಳ ಭಾಗವಾಗಿ ಈ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಲಾಗಿದೆ.<br>ಪ್ರತಿಯೊಂದು ಕಾರ್ಯಕ್ರಮವು ಆರು ತಿಂಗಳ ಅವಧಿಯದ್ದಾಗಿದ್ದು, ವಾರಕ್ಕೆ ಒಂದು ಅಥವಾ ಎರಡು ಬಾರಿ ತರಗತಿಗಳನ್ನು ನಡೆಸಲಾಗುತ್ತದೆ ಮತ್ತು 16 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಿನ ಭಾಗವಹಿಸುವವರಿಗೆ ಮುಕ್ತವಾಗಿದೆ. ಪಠ್ಯಕ್ರಮವು ಚಿತ್ರಕಲೆ, ಚಿತ್ರಕಲೆ ಮತ್ತು ರಂಗೋಲಿ ತಂತ್ರಗಳ ಮೂಲ ಹಂತದಿಂದ ಮುಂದುವರಿದ ಹಂತಗಳವರೆಗೆ ವ್ಯಾಪಿಸಿದೆ, ಪ್ರಾಯೋಗಿಕ ಅನ್ವಯಿಕೆ, ಕಲಾತ್ಮಕ ಅಭಿವ್ಯಕ್ತಿ ಮತ್ತು ಪೋರ್ಟ್‌ಫೋಲಿಯೊ ಅಭಿವೃದ್ಧಿಯ ಮೇಲೆ ಬಲವಾದ ಗಮನವನ್ನು ಹೊಂದಿದೆ. ಬಣ್ಣ ಸಿದ್ಧಾಂತ, ಸ್ಟಿಲ್-ಲೈಫ್ ಮತ್ತು ಲ್ಯಾಂಡ್‌ಸ್ಕೇಪ್ ಸ್ಕೆಚಿಂಗ್, ಫಿಗರ್ ಮತ್ತು ಪೋರ್ಟ್ರೇಟ್ ಡ್ರಾಯಿಂಗ್, ವಿಷಯಾಧಾರಿತ ಪರಿಶೋಧನೆ ಮತ್ತು ಸಾಂಪ್ರದಾಯಿಕ ಮತ್ತು ನೈಸರ್ಗಿಕ ವಸ್ತುಗಳನ್ನು (ಧಾನ್ಯಗಳು, ಎಲೆಗಳು, ಹೂವುಗಳು ಮತ್ತು ಬಣ್ಣದ ಪುಡಿಗಳು) ಬಳಸಿಕೊಂಡು ಸಾಂಪ್ರದಾಯಿಕ ರಂಗೋಲಿ ಶೈಲಿಗಳಲ್ಲಿ ತರಬೇತಿಯನ್ನು ಘಟಕಗಳು ಒಳಗೊಂಡಿವೆ. ವಿದ್ಯಾರ್ಥಿಗಳ ಕಲಿಕೆಯ ಫಲಿತಾಂಶಗಳನ್ನು ನಿರ್ಣಯಿಸಲು ಮತ್ತು ಕಲೆಗಳ ಸಮುದಾಯದ ಮೆಚ್ಚುಗೆಯನ್ನು ಉತ್ತೇಜಿಸಲು ಕಾರ್ಯಕ್ರಮಗಳು ಅಂತಿಮ ಪ್ರದರ್ಶನ ಮತ್ತು ಮೌಲ್ಯಮಾಪನದಲ್ಲಿ ಮುಕ್ತಾಯಗೊಳ್ಳುತ್ತವೆ. ಶ್ರೇಯೋ ಫೌಂಡೇಶನ್‌ನೊಂದಿಗಿನ ಸಹಯೋಗವು ಅನುಭವಿ ವೈದ್ಯರು ಮತ್ತು ಮಾರ್ಗದರ್ಶಕರನ್ನು ತರಗತಿಗಳನ್ನು ನಡೆಸಲು ಕರೆತರುತ್ತದೆ, ಶೈಕ್ಷಣಿಕ ಮೇಲ್ವಿಚಾರಣೆ ಮತ್ತು ಪ್ರಮಾಣೀಕರಣವನ್ನು ವಿಶ್ವವಿದ್ಯಾಲಯವು ನಿರ್ವಹಿಸುತ್ತದೆ.<br>ಅಂತೆಯೇ, ವಿಶ್ವವಿದ್ಯಾನಿಲಯದಿಂದ ಅಗತ್ಯ ಆಡಳಿತಾತ್ಮಕ ಮತ್ತು ಶೈಕ್ಷಣಿಕ ಸೌಲಭ್ಯದೊಂದಿಗೆ ಈ ಪ್ರಮಾಣಪತ್ರ ಕಾರ್ಯಕ್ರಮಗಳ ಔಪಚಾರಿಕ ಆರಂಭಕ್ಕಾಗಿ ಪರಿಷತ್‌ನ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಅಧಿನಿಯಮ 2009 ರ ಪ್ರಕರಣ 4 (4) (10) Fine Arts and Communication, ರಲ್ಲಿ ಅವಕಾಶವಿರುವಂತೆ ಅನುಮೋದಿಸಿತು.** |
| ವಿಷಯ 17 | **ಚರಕ ಜಯಂತಿಯ ಆಚರಣೆಗೆ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ.** |
| ಟಿಪ್ಪಣಿ | ಚರಕ ಜಯಂತಿ ಆಚರಣೆಗೆ ವಿಶ್ವವಿದ್ಯಾಲಯದ ಬೋಧಕರನ್ನು/ಸಂಶೋಧನಾ ಸಹಾಯಕರನ್ನು ನಿಯೋಜಿಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | ರಾಜ್ಯಾದ್ಯಂತ ಹಲವು ಆಯುರ್ವೇದ ಕಾಲೇಜುಗಳು ಚರಕ ಸಂಹಿತೆಯನ್ನು ಪಠಣ ಮಾಡುತ್ತಿದ್ದು, ಈ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಬೋಧಕರನ್ನು/ಸಂಶೋಧನಾ ಸಹಾಯಕರನ್ನು ನಿಯೋಜಿಸಲು ಸಭೆಯು ಅನುಮೋದಿಸಿತು. |
| ವಿಷಯ 18 | **ಫಲಿತಾಂಶ ಪ್ರಕಟಣೆಯಾದ ನಂತರ ಅಪೇಕ್ಷಿತ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ನೀಡಲು ಶುಲ್ಕವನ್ನು ನಿರ್ಣಯಿಸುವ ಕುರಿತು.** |

| | |
|---|---|
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದ ಹಾಗೂ ಅಧೀನ ವಿದ್ಯಾಲಯಗಳ ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಮುಗಿದು ಫಲಿತಾಂಶ ಪ್ರಕಟಣೆಯಾದ ನಂತರ ಅಪೇಕ್ಷಿತ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ನೀಡುವಂತೆ ವಿದ್ಯಾರ್ಥಿಗಳ ಕೋರಿಕೆಯನ್ನು ಆಧರಿಸಿ ಬೋಧಕ/ಬೋಧಕೇತರ ಸಂಘದವರು ವಿಶ್ವವಿದ್ಯಾಲಯವನ್ನು ಕೋರಿರುತ್ತಾರೆ. ಇವರ ಕೋರಿಕೆಯಂತೆ ವಿಶ್ವವಿದ್ಯಾಲಯದಿಂದ ಮುಂದಿನ ದಿನಗಳಲ್ಲಿ ಅಪೇಕ್ಷಿತ ವಿದ್ಯಾರ್ಥಿಗಳಿಗೆ ಉತ್ತರ ಪತ್ರಿಕೆಗಳ ನಕಲು ಪ್ರತಿಯನ್ನು ಡಿಜಿಟಲ್ ಮೋಡ್‌ನಲ್ಲಿ ನೀಡಲು ಹಾಗೂ ಅದಕ್ಕೆ ನಿಗದಿಪಡಿಸಬೇಕಾದ ಶುಲ್ಕದ ಕುರಿತು ನಿರ್ಣಯಿಸಲು ಸಭೆಗೆ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ನಕಲು ಪ್ರತಿಗಳನ್ನು ಡಿಜಿಟಲ್ ಮೋಡ್‌ನಲ್ಲಿ ಆಯಾ ವಿದ್ಯಾರ್ಥಿಗಳಿಗೆ ಮಾತ್ರ ನೀಡುವುದು. ಇದಕ್ಕಾಗಿ ಪ್ರತಿ ಪತ್ರಿಕೆಗೆ ರೂ.3000/- (ಮೂರು ಸಾವಿರ ರೂಪಾಯಿಗಳು ಮಾತ್ರ) ಶುಲ್ಕವನ್ನು ನಿಗಧಿಪಡಿಸುವಂತೆ ಸಭೆಯು ನಿರ್ಣಯಿಸಿತು.** |
| **ವಿಷಯ 19** | **ವಿದ್ಯಾವಾರಿಧಿ ಮಾಡುತ್ತಿರುವಾಗ ಬೇರೆ ಯಾವುದೇ ಇತರ ಪದವಿಗಳಿಗೆ ಪ್ರವೇಶ ಪಡೆದಿರುವುದಕ್ಕೆ ಸಂಬಂಧಿಸಿದಂತೆ ನಿರ್ಣಯಿಸುವ ಕುರಿತು.** |
| ಟಿಪ್ಪಣಿ | ವಿದ್ಯಾವಾರಿಧಿ ಮಾಡುತ್ತಿರುವಾಗ ಬೇರೆ ಯಾವುದೇ ಇತರ ಪದವಿಗಳಿಗೆ ಪ್ರವೇಶ ಪಡೆಯುವಂತಿಲ್ಲವೆಂದು ಯು.ಜಿ.ಸಿ ನಿಯಮಾವಳಿಗಳು ಸ್ಪಷ್ಟವಾಗಿ ಹೇಳುತ್ತಿದೆ. ಆದರೆ ಕೆಲವು ವಿದ್ಯಾರ್ಥಿಗಳು ವಿದ್ಯಾವಾರಿಧಿ ಹಾಗೂ ಎರಡನೆಯ ಸ್ನಾತಕೋತ್ತರ ಪದವಿಗಳಿಗೆ ಪ್ರವೇಶ ಪಡೆದಿರುವುದು ಗಮನಕ್ಕೆ ಬಂದಿದೆ. ಈ ಕುರಿತು ನಿರ್ಣಯಿಸಲು ಹಾಗೂ ಈಗಾಗಲೇ ಈ ರೀತಿಯಾಗಿ ಪ್ರವೇಶ ಪಡೆದವರ ಹಾಗೂ ಪದವಿ ಪಡೆದವರ ಕುರಿತು ವಹಿಸಬೇಕಾದ ಕ್ರಮದ ಕುರಿತು ನಿರ್ಣಯಿಸಲು ಸಭೆಗೆ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಈ ರೀತಿಯ ಪ್ರಕರಣಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುವಂತೆ ಸಂಬಂಧಪಟ್ಟ ಮಾರ್ಗದರ್ಶಕರಿಗೆ ಸೂಚನೆ ನೀಡುವುದು. ಹಾಗೂ ವಿದ್ಯಾರ್ಥಿಗಳಿಂದ Undertaking ತೆಗೆದುಕೊಳ್ಳುವುದು ಮತ್ತು ಅಧಿಸೂಚನೆಯಲ್ಲಿ ಷರತ್ತು ವಿಧಿಸುವಂತೆ ನಿರ್ಣಯಿಸಲಾಯಿತು.** |
| **ವಿಷಯ 20** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದ ಮೌಲ್ಯಮಾಪಕರು ಕೇಂದ್ರೀಕೃತ ಮೌಲ್ಯಮಾಪನ ವ್ಯವಸ್ಥೆಯಡಿಯಲ್ಲಿ ಮೌಲ್ಯಮಾಪನ ಕೇಂದ್ರದೊಳಗಡೆಯೇ ಮೌಲ್ಯಮಾಪನ ಮಾಡುವ ಕುರಿತು.** |
| ಟಿಪ್ಪಣಿ | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದ ವಿದ್ಯಾರ್ಥಿಗಳ ಪರೀಕ್ಷಾ ಮೌಲ್ಯಮಾಪನವನ್ನು ಸ್ಥಳದ ಅಭಾವದಿಂದ ಈ ತನಕ ವಿಭಾಗಗಳಲ್ಲಿ ನಡೆಸುತ್ತಿದ್ದು, ಪ್ರಸ್ತುತ ಸಾಲಿನಿಂದ ಸಿಂಡಿಕೇಟ್ ಹಾಲ್‌ನಲ್ಲಿ ಕೇಂದ್ರೀಕೃತ ಮೌಲ್ಯಮಾಪನ ವ್ಯವಸ್ಥೆಯಡಿಯಲ್ಲಿ ನಡೆಸಲು ಹಾಗೂ ಎಲ್ಲಾ ಮೌಲ್ಯಮಾಪಕರು ಮೌಲ್ಯಮಾಪನ ಕೇಂದ್ರದೊಳಗೆಯೇ ಮೌಲ್ಯಮಾಪನ ಮಾಡುವಂತೆ ಸಭೆಗೆ ವಿಷಯವನ್ನು ಮಂಡಿಸಿದೆ. |
| ನಿರ್ಣಯ | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪರಿಸರದ ವಿದ್ಯಾರ್ಥಿಗಳ ಪರೀಕ್ಷಾ ಮೌಲ್ಯಮಾಪನವನ್ನು ಕೇಂದ್ರೀಕೃತವಾಗಿ ಒಂದೇ ಕಡೆ ನಡೆಸುವಂತೆ ಸಭೆಯು ಸರ್ವಾನುಮತದಿಂದ ಒಪ್ಪಿತು.** |
| **ವಿಷಯ 21** | **ಪ್ರವೇಶ ಪತ್ರದ ವಿತರಣ ವ್ಯವಸ್ಥೆಯನ್ನು ನಿಯಮಬದ್ಧವಾಗಿ ಸುಧಾರಿಸುವ ಕುರಿತು.** |
| ಟಿಪ್ಪಣಿ | **UUCMS** ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಪ್ರವೇಶ ಪತ್ರವನ್ನು ಕೇಂದ್ರೀಕೃತ ವ್ಯವಸ್ಥೆಯಡಿಯಲ್ಲಿ **Principal Login** ಮೂಲಕ ಡೌನ್ಲೋಡ್ ಮಾಡಿ ಮುದ್ರಿಸಲು ಅವಕಾಶ ನೀಡಿರುತ್ತಾರೆ. ವಿಶ್ವವಿದ್ಯಾಲಯದ ಪರಿಸರದಲ್ಲಿ ಅಧ್ಯಯನಾಂಗ ನಿರ್ದೇಶಕರು **Principal Login**ನ ಅಧಿಕೃತ ಅಧಿಕಾರಿಗಳಾಗಿರುತ್ತಾರೆ. ಆದ್ದರಿಂದ 2025-26ನೇ ಸಾಲಿನಿಂದ ಅಧ್ಯಯನಾಂಗದಲ್ಲಿ ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರಿಗೆ |

| | |
|---|---|
| | ನೀಡಬಹುದಾಗಿರುತ್ತದೆ. ವಿಭಾಗಗಳ ಮುಖ್ಯಸ್ಥರುಗಳಿಗೆ ವಿದ್ಯಾರ್ಥಿಗಳಿಗೆ ನೀಡುವ ಜವಾಬ್ದಾರಿಯನ್ನು ವಹಿಸುವುದರಿಂದ ಪ್ರವೇಶ ಪತ್ರದ ವಿತರಣ ವ್ಯವಸ್ಥೆಯು ನಿಯಮಬದ್ಧವಾಗಿ ನಡೆದಂತಾಗುವುದು. ಈ ಕುರಿತು ನಿರ್ಣಯಿಸಲು ಸಭೆಗೆ ವಿಷಯವನ್ನು ಮಂಡಿಸಿದೆ. |
| **ನಿರ್ಣಯ** | **2025-26ನೇ ಸಾಲಿನಿಂದ ಅಧ್ಯಯನಾಂಗದ ನಿರ್ದೇಶಕರ ಲಾಗಿನ್‌ನಲ್ಲಿ ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿ ಸಂಬಂಧಿಸಿದ ವಿಭಾಗಗಳ ಮುಖ್ಯಸ್ಥರಿಗೆ ನೀಡುವುದೆಂದು ನಿರ್ಣಯಿಸಲಾಯಿತು.** |
| **ವಿಷಯ 22** | **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2025-26ನೇ ಸಾಲಿನ PROSPECTUS ಗೆ ಅನುಮೋದನೆ ಪಡೆಯುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ 2025-26ನೇ ಸಾಲಿನ PROSPECTUS ಅನ್ನು ಈಗಾಗಲೇ ಮುದ್ರಿಸಿ, ಬಿಡುಗಡೆ ಮಾಡಲಾಗಿದೆ. ಬಿಡುಗಡೆಯಾಗಿರುವ **PROSPECTUS** ಗೆ ಸಭೆಯ ಅನುಮೋದನೆಗಾಗಿ ಮಂಡಿಸಿದೆ. |
| **ನಿರ್ಣಯ** | **ಸಭೆಯು ಸರ್ವಾನುಮತದಿಂದ ಅನುಮೋದಿಸಿತು.** |
| **ವಿಷಯ 23** | **ವಿಭಾಗವಾರು BOS ಸಭೆಗಳನ್ನು ನಡೆಸುವ ಬಗ್ಗೆ.** |
| **ಟಿಪ್ಪಣಿ** | ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಎಲ್ಲಾ ಶೈಕ್ಷಣಿಕ ವಿಭಾಗದ ಮುಖ್ಯಸ್ಥರು UGC ನಿಯಮಾನುಸಾರ BOS ಸಭೆಗಳನ್ನು ಕಡ್ಡಾಯವಾಗಿ ನಡೆಸಲು ಸಭೆಯ ಅನುಮತಿಗೆ ಮಂಡಿಸಿದೆ. |
| **ನಿರ್ಣಯ** | **UGC ನಿಯಮಾನುಸಾರ BOS ಸಭೆಗಳನ್ನು ಕಡ್ಡಾಯವಾಗಿ ನಡೆಸಲು ಸಭೆಯು ಅನುಮತಿಸಿತು. ಹಾಗೂ ಸಭಾನಡವಳಿಗಳು ಮತ್ತು ಮತ್ತಿತರ ದಾಖಲೆಗಳನ್ನು ವಿಭಾಗಗಳ ಮುಖ್ಯಸ್ಥರುಗಳು ಸೂಕ್ತ ಕಡತಗಳಲ್ಲಿ ನಿರ್ವಹಿಸಲು ನಿರ್ದೇಶಿಸಿತು.** |
| **ವಿಷಯ 24** | **ವಿವಿಧ ಸಂಸ್ಥೆಗಳು ಅನುದಾನ ರಹಿತವಾಗಿ ಅನುಮತಿ ಪಡೆದು ಪ್ರಾರಂಭ ಮಾಡಿದ್ದ ಸಂಸ್ಕೃತ ಕಾಲೇಜುಗಳು ಕಾರಣಾಂತರಗಳಿಂದ ಮುಚ್ಚಲ್ಪಟ್ಟಿವೆ. ಇವುಗಳ ಬಗ್ಗೆ ಸಭೆಗೆ ಮಾಹಿತಿ ನೀಡುವ ಕುರಿತು.** |
| **ಟಿಪ್ಪಣಿ** | ವಿವಿಧ ಸಂಸ್ಥೆಗಳು ಅನುದಾನ ರಹಿತವಾಗಿ ಅನುಮತಿ ಪಡೆದು ಪ್ರಾರಂಭ ಮಾಡಿದ್ದ ಈ ಕೆಳಕಂಡ ಪಟ್ಟಿಯಲ್ಲಿ ಸೂಚಿಸಿರುವ ಸಂಸ್ಕೃತ ಕಾಲೇಜುಗಳು ಕಾರಣಾಂತರಗಳಿಂದ ಮುಚ್ಚಲ್ಪಟ್ಟಿವೆ. ಅವುಗಳ ಬಗ್ಗೆ ಸಭೆಯ ಮಾರ್ಗದರ್ಶನವನ್ನು ಕೋರಿ ವಿಷಯವನ್ನು ಮಂಡಿಸಿದೆ. |

| **ಮುಚ್ಚಿದ ಕಾಲೇಜಿನ ಹೆಸರು** | **ಕಾಲೇಜುಗಳ ಮುಚ್ಚಲು ಕಾರಣಗಳು** | **ಮುಚ್ಚಲಾದ ಶೈಕ್ಷಣಿಕ ವರ್ಷ** |
|---|---|---|
| 1. ಶ್ರೀ ಆದಿಚುಂಚನಗಿರಿ ಸಂಸ್ಕೃತ ಕಾಲೇಜು, ರವೀಂದ್ರನಗರ, ಹಾಸನ-573201 | ಕಡಿಮೆ ವಿದ್ಯಾರ್ಥಿಗಳ ಕಾರಣದಿಂದ ಮತ್ತು ಯಾರೂ ಪ್ರವೇಶ ಪಡೆಯದಿದ್ದರಿಂದ ಕಾಲೇಜು ನಿಲ್ಲಿಸಲಾಗಿದೆ | 2023-24 |
| 2. ಶ್ರೀ ಜಗದ್ಗುರು ರೇಣುಕಾಚಾರ್ಯ ಸಂಸ್ಕೃತ ವೇದ ಕಾಲೇಜು, ಬಾಳೆಹೊನ್ನೂರು-577112 | ಯಾರೂ ಪ್ರವೇಶ ಪಡೆಯದಿದ್ದರಿಂದ ಕಾಲೇಜು ನಿಲ್ಲಿಸಲಾಗಿದೆ | 2023-24 |
| 3. ಉಜ್ಜಯಿನಿ ಜಗದ್ಗುರು ಸಿದ್ಧಗಡ್ಡೇಶ್ವರ ಸಂಸ್ಕೃತ ಕಾಲೇಜು, ಗುಗ್ಗರಹಟ್ಟಿ, ಬಳ್ಳಾರಿ | ಯಾರೂ ಪ್ರವೇಶ ಪಡೆಯದಿದ್ದರಿಂದ ಕಾಲೇಜು ನಿಲ್ಲಿಸಲಾಗಿದೆ | 2023-24 |
| 4. ಶ್ರೀ ಗುರುಶಾಂತೇಶ್ವರ ಸಾವೇದ ಸಂಸ್ಕೃತ ಕಾಲೇಜು, ಹಿರೇಮಠ, ಹುಕ್ಕೇರಿ, ಬೆಳಗಾವಿ ಜಿಲ್ಲೆ | ಯಾರೂ ಪ್ರವೇಶ ಪಡೆಯದಿದ್ದರಿಂದ ಕಾಲೇಜು ನಿಲ್ಲಿಸಲಾಗಿದೆ | 2023-24 |

| | | | |
|---|---|---|---|
| | 5. ಶ್ರೀ ಕುಮಾರೇಶ್ವರ ಸಂಸ್ಕೃತ ಕಾಲೇಜು, ಶಿವಯೋಗಮಂದಿರ, ಬಾದಾಮಿ ತಾ.– 587201, ಬಾಗಲಕೋಟೆ ಜಿಲ್ಲೆ | ಅನಿವಾರ್ಯ ಕಾರಣಗಳಿಂದಾಗಿ ಕಾಲೇಜು ನಿಲ್ಲಿಸಲಾಗಿದೆ | 2022–23 |
| ನಿರ್ಣಯ | ಮುಂದಿನ ಸಭೆಯಲ್ಲಿ ಮಂಡಿಸುವಂತೆ ತಿರ್ಮಾನಿಸಿತು. | | |

| | |
|---|---|
| ವಿಷಯ 25 | **UUCMS ನಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ಸೇರಿಸಲು ಸಭೆಯ ಅನುಮತಿ ಕೋರಿ.** |
| ಟಿಪ್ಪಣಿ | ಅನುಮತಿ ಪಡೆದು ಸಂಯೋಜಿತ ಸಂಸ್ಕೃತ ಕಾಲೇಜುಗಳಲ್ಲಿ ಈಗಾಗಲೇ ಈ ಕೆಳಕಂಡ ಕೋರ್ಸ್‌ಗಳು ನಡೆಯುತ್ತಿವೆ . ಆದರೆ UUCMS ನಲ್ಲಿ ಸೇರಿರುವುದಿಲ್ಲ. UUCMS ನಲ್ಲಿ ಈ ಕೆಳಕಂಡ ಕೋರ್ಸ್‌ಗಳನ್ನು ಸೇರಿಸಲು ಸಭೆಯ ಅನುಮತಿಗೆ ವಿಷಯವನ್ನು ಮಂಡಿಸಿದೆ. |

| SL No. | Name | Discipline (Kannada) |
|---|---|---|
| 01 | Shaivagama | ಶೈವಾಗಮ |
| 02 | Vaikhanasagama | ವೈಖಾನಸಾಗಮ |
| 03 | Pancharatragama | ಪಂಚರಾತ್ರಾಗಮ |
| 04 | Tantrasaragama | ತಂತ್ರಸಾರಾಗಮ |
| 05 | Vaatuladyagama | ವಾತುಲದ್ಯಾಗಮ |
| 06 | Veerashaivagama | ವೀರಶೈವಾಗಮ |
| 07 | Jainagama | ಜೈನಾಗಮ |
| 08 | Shuklayajurveda Madhyandina | ಶುಕ್ಲಯಜುರ್ವೇದ ಮಧ್ಯಂದಿನಶಾಖಾ |
| 09 | Shuklayajurveda Kanva | ಶುಕ್ಲಯಜುರ್ವೇದ ಕಣ್ವಶಾಖಾ |
| 10 | Divya Prabandha | ದಿವ್ಯಪ್ರಬಂಧ |

| | |
|---|---|
| ನಿರ್ಣಯ | **UUCMS ನಲ್ಲಿ ಈ ಮೇಲ್ಕಂಡ ಕೋರ್ಸ್‌ಗಳನ್ನು ಸೇರಿಸಲು ಸಸಭೆಯು ಅನುಮತಿಸಿತು.** |
| | **ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇನ್ನಿತರೆ ವಿಷಯಗಳು** |
| ವಿಷಯ 01 | **PHD Course Work ತರಗತಿಗಳನ್ನು ಪ್ರತಿ ಶನಿವಾರ ನಡೆಸಲು ಅನುಮೋದಿಸುವ ಬಗ್ಗೆ.** |
| ಟಿಪ್ಪಣಿ | PHD Course Work ತರಗತಿಗಳನ್ನು ಪ್ರತಿ ಶನಿವಾರ ನಡೆಸಲು ಸಭೆಯ ಅನುಮೋದನೆಗೆ ಮಂಡಿಸಿದೆ. |
| ನಿರ್ಣಯ | **PHD Course Work ತರಗತಿಗಳನ್ನು ಪ್ರತಿ ಶನಿವಾರ ನಡೆಸಲು ಸಭೆಯು ಸರ್ವಾನುಮತದಿಂದ ಅನುಮತಿಸಿತು.** |

**ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.**

**ಪ್ರೊ. ಸಿ. ಪಾಲಯ್ಯ**
ಕುಲಸಚಿವರು(ಪ್ರ)
**ಸದಸ್ಯ ಕಾರ್ಯದರ್ಶಿಗಳು**

**ಡಾ. ಅಹಲ್ಯಾ ಎಸ್.**
ಕುಲಪತಿಗಳು
**ಅಧ್ಯಕ್ಷರು**